# ಸಹ್ಯಾದ್ರಿ ಕಾಲೇಜ್: ವಿದ್ಯಾರ್ಥಿ ಪರಿಷತ್ ಸದಸ್ಯರಿಗೆ ನಾಯಕತ್ವ ಅಭಿವೃದ್ಧಿ ತರಬೇತಿ

**ಮಹಾನಗರ,** ಸೆ. 22: ಇಲ್ಲಿನ ಸಹ್ಯಾದ್ರಿ ಕಾಲೇಜ್ ಆಫ್ ಎಂಜಿನಿಯರಿಂಗ್ ಮತ್ತು ಮ್ಯಾನೇಜ್‌ಮೆಂಟ್‌ನ ಎಂಬಿಎ ವಿಭಾಗವು ವಿದ್ಯಾರ್ಥಿ ಸಂಘಟನೆಗಳ ಸದಸ್ಯರಿಗಾಗಿ ಸೆ. 20ರಂದು ಒಂದು ದಿನದ ನಾಯಕತ್ವ ಅಭಿವೃದ್ಧಿ ತರಬೇತಿ ಕಾರ್ಯಕ್ರಮವನ್ನು ಆಯೋಜಿಸಿತ್ತು.

ಕೆನರಾ ಕಾಲೇಜಿನ ಪ್ರಾಂಶುಪಾಲರಾದ ಡಾ| ಕೆ.ವಿ. ಮಾಲಿನಿ ಮತ್ತು ಕೋಸ್ಟಲ್ ವುಡ್ ನಟ ಪೃಥ್ವಿ ಅಂಬರ್ ಅವರು ಕಾರ್ಯಕ್ರಮನ್ನು ಉದ್ಘಾಟಿಸಿದರು. ದಕ್ಷಿಣ ಕನ್ನಡ ಮತ್ತು ಕೊಡಗು ಜಿಲ್ಲೆಗಳ 22 ಕಾಲೇಜುಗಳ ಒಟ್ಟು 221 ವಿದ್ಯಾರ್ಥಿ ಪರಿಷತ್ ಸದಸ್ಯರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

ಎಂಬಿಎ ನಿರ್ದೇಶಕ ಡಾ| ವಿಶಾಲ್ ಸಮರ್ಥಾ ಅವರು ಸ್ವಾಗತಿಸಿದರು. ಮುಖ್ಯ ಸಂಯೋಜಕರಾದ ಪ್ರೊ| ಸುಷ್ಮಾ ವಿ. ಅವರು ಸಹ್ಯಾದ್ರಿಯ ಎಲ್‌ಡಿಪಿಯ ನಾಲ್ಕು ವರ್ಷಗಳ ನಾಯಕತ್ವ ಅಭಿವೃದ್ಧಿ ತರಬೇತಿ ಕಾರ್ಯಕ್ರಮದ ಬಗ್ಗೆ ವಿವರಿಸಿದರು.



ನಾಯಕತ್ವ ಅಭಿವೃದ್ಧಿ ತರಬೇತಿಯಲ್ಲಿ ಗಣ್ಯರು ಮಾತನಾಡಿದರು.

ಡಾ| ಕೆ.ವಿ. ಮಾಲಿನಿ ಅವರು ಹೊರಗಿನ ವಿದ್ಯಾರ್ಥಿ ಪರಿಷತ್ ನಾಯಕರಿಗೆ ಇಂತಹ ಚಿಂತನಶೀಲ ಕಾರ್ಯಕ್ರಮವನ್ನು ಆಯೋಜಿಸಿದ್ದಕ್ಕಾಗಿ ಸಹ್ಯಾದ್ರಿ ಕಾಲೇಜನ್ನು ಶ್ಲಾಘಿಸಿದರು.

ಪೃಥ್ವಿ ಅಂಬರ್ ಅವರು ನಾಯಕರಾಗಲು ಬೇಕಾಗುವ ಮುಖ್ಯ ಅಂಶಗಳ ಬಗ್ಗೆ ಮಾತನಾಡಿದರು.

ಅಧ್ಯಕ್ಷತೆ ವಹಿಸಿದ್ದ ಸಹ್ಯಾದ್ರಿ ಕಾಲೇಜು ಪ್ರಾಂಶುಪಾಲ ಡಾ| ಆರ್. ಶ್ರೀನಿವಾಸ ರಾವ್ ಕುಂಟೆ ಅವರು ಕಾಲೇಜುಗಳಲ್ಲಿ ವಿದ್ಯಾರ್ಥಿ ಸಂಘಟನೆಗಳ ಸದಸ್ಯರು ಗಮನಿಸ ಬೇಕಾದ ಅಂಶಗಳನ್ನು ವಿವರಿಸಿದರು.

'ಸ್ಟೋರಿ ಟೆಲ್ಲಿಂಗ್ ಮೂಲಕ ಜೀವನ ಕೌಶಲ್ಯಗಳು' ಕುರಿತು ಎಂಬಿಎ ನಿರ್ದೇಶಕರಾದ ಡಾ| ವಿಶಾಲ್ ಸಮರ್ಥ, 'ಉದಯೋನ್ಮುಖ ನಾಯಕರ ನಿರೀಕ್ಷೆ' ಕುರಿತು ಡಾ| ಶರಣ್ ಕುಮಾರ್ ಶೆಟ್ಟಿ 'ನಾಯಕರಾಗಿ ಹುಟ್ಟಿಲ್ಲ, ನಾವು ತಯಾರು ಮಾಡಬೇಕು' ವಿಷಯದ ಕುರಿತು ಪ್ರೊ| ರಮೇಶ್ ಕೆ.ಜಿ., ಮತ್ತು ಪ್ರೊ| ಸಮರ್ಥ್ ಶೆಣೈ ಅವರು ತರಬೇತಿ ಕಾರ್ಯಕ್ರಮ ನಡೆಸಿಕೊಟ್ಟರು.

ಪ್ರೊ| ಸುಶ್ಮಾ ವಿ. ಮತ್ತು ಪ್ರೊ| ಮೋನಿಶಾ ಶೆಟ್ಟಿ ಕಾರ್ಯಕ್ರಮ ಸಂಯೋಜಿಸಿದ್ದರು.